ಫಾರಂ ನಂ.4 (ಕ್ರಿಮಿನಲ್)
ಡಿಪೋಶಿಷನ್ ಶೀಟ್ಸ್

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ತರೀಕೆರೆ**

**ಸಿ.ಸಿ.ನಂ.*55/2019***

ಸಾಕ್ಷಿಯ ಹೆಸರು ಃ ಸವಿತಾ ಸಿಡಬ್ಲ್ಯೂ *-04*

ಗಂಡನ ಹೆಸರು ಃ ಚಂದ್ರಶೇಖರ ಪಿಡಬ್ಲ್ಯೂ *-01*

ವಯಸ್ಸು ಃ *28* ವರ್ಷ

ಉದ್ಯೋಗ ಃ ಗೃಹಿಣಿ

ವಾಸ ಸ್ಥಳ ಃ ಬೇಲೇನಹಳ್ಳಿ

ದಿನಾಂಕಃ *22-03-2021* ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದ ಃ**

ಚಾಸಾ *1* ರವರ ಪರಿಚಯವಿಲ್ಲ. ಚಾಸಾ *2, 3, 5* ರಿಂದ *10* ರವರ ಪರಿಚಯವಿಲ್ಲ. ಆರೋಪಿಯ ಪರಿಚಯವಿದೆ. ಅವರು ನಮ್ಮ ಪಕ್ಕದ ಮನೆಯವರು.

ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-*1* ಎಂದು ಸಾಕ್ಷಿಯ ಸಹಿಯನ್ನು ನಿಪಿ-*1*(ಎ) ಎಂದು ಗುರುತಿಸಲಾಯಿತು. ಭಾವಚಿತ್ರಗಳನ್ನು ನೋಡುತ್ತಿದ್ದೇನೆ. ಅವುಗಳನ್ನು ನಿಪಿ *2, 3* ಎಂದು ಗುರುತಿಸಲಾಯ್ತು. ನಿಪಿ *1* ಅನ್ನು ಆರೋಪಿಯ ಮನೆಯಲ್ಲಿ ಬರೆಯಲಾಗಿದೆ. ಆಗ ನಾನು ಸಹಿ ಮಾಡಿದ್ದೇನೆ. ನಿಪಿ *1* ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಅಲ್ಲಿಗೆ ಪೊಲೀಸರು ಬಂದಿದ್ದರು. ಯಾವ ವಿಚಾರಕ್ಕೆ ಬರೆಯಲಾಗಿದೆ ಎಂದು ಗೊತ್ತಿಲ್ಲ, ಯಾರ್ಯಾರು ಇದ್ದರು ಗೊತ್ತಿಲ್ಲ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-**

ಆರೋಪಿ ಅವರ ಮನೆಯಲ್ಲಿ ಚೀಟಿ ವ್ಯವಹಾರ ಮಾಡುತ್ತಿದ್ದ ಬಗ್ಗೆ ಸದರಿ ದಾಖಲೆ ಬರೆಯಲಾಗಿದೆ ಎಂದರೆ ಸರಿಯಲ್ಲ. ಆರೋಪಿ ಚೀಟಿ ವ್ಯವಹಾರ ಹಾಗೂ ಬಡ್ಡಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆ ಸಂಬಂದ ಪೊಲೀಸರು ಸ್ಥಳಕ್ಕೆ ಬಂದು ಮಹಜರು ಮಾಡಿದಾಗ ಅದನ್ನು ಓದಿ ತಿಳಿದು ಸಹಿ ಮಾಡಿದ್ದೇನೆಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ  ಆರೋಪಿ ಪರ ಜೆ ಟಿ ಜೆ ವಕೀಲರವರಿಂದಃ-</u>**

ಖಾಲಿ ಹಾಳೆ ಮೇಲೆ ನನ್ನ ಸಹಿ ಪಡೆದಿದ್ದಾರೆ.

**ಮರುವಿಚಾರಣೆ ಇಲ್ಲಃ**

*(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)*

ಓ ಹೇ ಕೇ ಸ ಇ ಎ ಒ
ಸಹಿ/-

(ಎಂ.ಸಿ. ನಂಜೇಗೌಡ)
ಪ್ರಪ್ರದನ್ಯಾದಂಃ ತರೀಕೆರೆ.